ಸುಂದರರ್ ಮತ್ತು ಪರವೈ ನಾಚಿಯಾರ್

ಕಥೆ : ಪರುತ್ತಿಯಾರ್ ಕೆ. ಸಂತಾನರಾಮನ್ ಚಿತ್ರ : ಶಂಕರ್

1 ತಿರುವಾರೂರಿನಲ್ಲಿ ಸಾಕ್ಷಾತ್ ಶಿವನೇ ಸುಂದರರ ಸ್ನೇಹಿತನಾಗಿ ಕಾಣಿಸಿಕೊಂಡಿದ್ದ. ಶಿವನೊಂದಿಗೆ ಪ್ರತಿದಿನವೂ ಮಾತುಕತೆ ನಡೆಸುವ ಮಹಾಭಾಗ್ಯ ಸುಂದರರಿಗೆ ಒದಗಿಬಂದಿತ್ತು. ಒಂದು ಸಲ ಸುಂದರರನ್ನು ಸ್ವಾಗತಿಸಲು ಭಕ್ತರ ಒಂದು ದೊಡ್ಡ ಗುಂಪೇ ವೃದ್ಧಾಚಲದ ಹೊರಭಾಗದಲ್ಲಿ ನೆರೆದಿತ್ತು.

2 ಮಣಿಮುಕ್ತಾನದಿ ಹಾಗೂ ಅದರ ದಡದಲ್ಲಿರುವ ಪಳಮಲೈ ನಾಥನ್ ದೇವಾಲಯ ಸುಂದರವಾಗಿ ಕಾಣಿಸುತ್ತಿದೆ. ಈ ಸ್ಥಳದ ಜನರು ನಿಜಕ್ಕೂ ಧನ್ಯರು.

ಸುಂದರರೇ, ತಮ್ಮ ಆಗಮನದಿಂದ ನಾವೆಲ್ಲರೂ ಈಗ ಧನ್ಯರಾದೆವು.

3 ಸುಂದರರು ದೇವಾಲಯದಲ್ಲಿ ಒಂದು ಸ್ತೋತ್ರವನ್ನು ಹಾಡಿ ಪಳಮಲೈನಾಥನನ್ನು ಪೂಜಿಸಿದರು.

4

ಕೆಲವು ದಿನಗಳಲ್ಲಿ ತಿರುವಾರೂರಿನಲ್ಲಿ ಫಾಲ್ಗುಣ ಉತ್ತರಾ ನಕ್ಷತ್ರದ ಹಬ್ಬವು (ಮಾರ್ಚ್–ಏಪ್ರಿಲ್‌ನಲ್ಲಿ)ನಡೆಯಲಿದೆ. ಭಕ್ತರಿಗೆ ಭೋಜನ ಮಾಡಿಸುವುದಕ್ಕಾಗಿ ನನ್ನ ಪತ್ನಿ ಪರವೈನಾಚಿಯಾರ್ ಈಗ ತಯಾರಿ ಮಾಡುತ್ತಿರಬೇಕು. ಅದರ ಖರ್ಚಿಗಾಗಿ ನಾನೀಗ ಪಳಮಲೈನಾಥನನ್ನು ಬೇಡಿ ಕೆಲವು ಚಿನ್ನದ ನಾಣ್ಯಗಳನ್ನು ಪಡೆಯಬೇಕು.

5 ಪಳಮಲೈನಾಥನು ಸುಂದರರೊಂದಿಗೆ ಮಾತನಾಡಿದ.



ದೇವರೇ, ನಿನಗೆ ಗೊತ್ತಿಲ್ಲವೆ? ಈಗಲೇ ನನಗೆ ಹನ್ನೆರಡು ಸಾವಿರ ಚಿನ್ನದ ನಾಣ್ಯಗಳು ಬೇಕು.

6

ಅಷ್ಟೇ ತಾನೆ? ಇಗೋ, ತೆಗೆದುಕೋ.

7

ಭಗವಂತ, ನನ್ನದೊಂದು ಸಣ್ಣ ಕೋರಿಕೆ. ನಿನ್ನ ಸ್ತುತಿ ಮಾಡುತ್ತಾ ನಾನು ಊರಿಂದೂರಿಗೆ ಹೋಗುತ್ತಿರುತ್ತೇನೆ. ಈ ನಾಣ್ಯವನ್ನೆಲ್ಲಾ ನಾನು ಹೇಗೆ ಹೊತ್ತುಕೊಂಡುಹೋಗಲಿ? ಅವನ್ನೆಲ್ಲಾ ನೀನು ಮಣಿಮುಕ್ತಾ ನದಿಯಲ್ಲಿ ಹಾಕಿ, ಅನಂತರ ತಿರುವಾವುರಿನ ಕಮಲಾಲಯ ಪುಷ್ಕರಿಣಿಯಿಂದ ಅದನ್ನು ತೆಗೆಯುವಂತೆ ಮಾಡಿದರೆ ಒಳ್ಳೆಯದು.



ನಿನ್ನಿಚ್ಛೆಯಂತೆಯೇ ಆಗಲಿ.

8

ಸ್ನೇಹಿತನಂತೆ ಸುಂದರರ್ ಶಿವನನ್ನು ಛೇಡಿಸತೊಡಗಿದರು.

ನಿನ್ನನ್ನು ಹೇಗೆ ನಂಬಲಿ? ನೀನು ಮಾಯಾಧೀಶ್ವರನಲ್ಲವೆ? ತಿರುವಾರೂರಿಗೆ ನಾಣ್ಯಗಳು ತಲುಪುವಾಗ ಅದು ಕೆಳದರ್ಜೆಯ ನಾಣ್ಯಗಳಾಗಿದ್ದರೆ?

ಅದಕ್ಕೆ ನಾನೇನು ಮಾಡಲಿ?

9

ಭಗವಾನ್, ನೀನು ನನಗೆ ನೀಡಿದ ನಾಣ್ಯಗಳಲ್ಲಿ ಕೆಲವನ್ನು ಇಟ್ಟುಕೊಳ್ಳುತ್ತೇನೆ. ಕಮಲಾಲಯ ಪುಷ್ಕರಿಣಿಯಿಂದ ನಾಣ್ಯಗಳನ್ನು ಹೊರತೆಗೆದ ನಂತರ, ಈ ನಾಣ್ಯಗಳೊಂದಿಗೆ ಅದನ್ನು ಹೋಲಿಸಿ ನೋಡುತ್ತೇನೆ.

ನಿನ್ನ ಮನಬಂದಂತೆ ಮಾಡು, ಗೆಳೆಯ!

10 ಹಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದ ನಂತರ ಸುಂದರರು ತಿರುವಾವ್ಪೂರಿಗೆ ಬಂದರು.

11 ಸುಂದರರು ಕಮಲಾಲಯ ಪುಷ್ಕರಿಣಿಗೆ ಇಳಿದು, ಹುಡುಕತೊಡಗಿದರು.



ಸುಂದರರು ಕೂಡಲೇ ಶಿವನ ಸ್ತುತಿಯೊಂದನ್ನು ಹಾಡಿದರು. ಆಗ ಅಲ್ಲಿ ಹಲವಾರು ಚಿನ್ನದ ನಾಣ್ಯಗಳಿಂದ ತುಂಬಿದ ಚೀಲಗಳು ಕಾಣಿಸಿಕೊಂಡವು.

12 ಆಗ ಅಲ್ಲಿ ವಿನಾಯಕನು ಚಿನ್ನದ ವ್ಯಾಪಾರಿಯ ವೇಷದಲ್ಲಿ ಕಾಣಿಸಿಕೊಂಡ. ಚಿನ್ನದ ನಾಣ್ಯಗಳ ಗುಣಮಟ್ಟವನ್ನು ಪರೀಕ್ಷೆ ಮಾಡುವುದಕ್ಕಾಗಿ ಅವನು ಆ ವೇಷದಲ್ಲಿ ಬಂದಿದ್ದ. ಸುಂದರರು ಅವನಿಗೆ ನಾಣ್ಯಗಳನ್ನು ಪರೀಕ್ಷಿಸಲು ಹೇಳಿದರು.



13

ದುಃಖಿತರಾದ ಸುಂದರರು ಶಿವನನ್ನು ಸ್ತುತಿಸುತ್ತ ಮತ್ತೆ ಹಾಡಿದರು. ಅವರ ಸ್ತುತಿಯನ್ನು ಕೇಳುವುದಕ್ಕಾಗಿಯೇ ಶಿವನು ಈ ರೀತಿ ಆಟವಾಡಿದ. ಅನಂತರ ಅವನು ಒಕ್ಕೆಯ ಗುಣಮಟ್ಟದ ನಾಣ್ಯಗಳನ್ನು ನೀಡಿದ. ಸುಂದರರು ಚಿನ್ನದ ವ್ಯಾಪಾರಿಗೆ ಆ ನಾಣ್ಯಗಳನ್ನು ಪರೀಕ್ಷೆ ಮಾಡಲು ಹೇಳಿದರು.



ಧನ್ಯವಾದಗಳು. ಪರವ್ಯೆ, ಈ ಚಿನ್ನದ ನಾಣ್ಯಗಳನ್ನು ತೆಗೆದುಕೋ. ಅವುಗಳನ್ನು ನೀನು ಫಾಲ್ಗುಣ ಮಾಸದ ಉತ್ತರಾ ಹಬ್ಬಕ್ಕಾಗಿ ಬಳಸು.

14



ಚಿನ್ನದ ವ್ಯಾಪಾರಿ ಮಾಡಿಕೊಟ್ಟ ಕೆಲಸಕ್ಕಾಗಿ ಹಣ ನೀಡಲು ಅವನತ್ತ ಸುಂದರರು ತಿರುಗಿದರು. ಅತ್ಯಾಶ್ಚರ್ಯ! ಅಲ್ಲಿ ವ್ಯಾಪಾರಿಯ ಬದಲು ಭಗವಾನ್ ಗಣೇಶನೇ ನಿಂತಿದ್ದ. ಸುಂದರರು ಅವನಿಗೆ ನಮಸ್ಕರಿಸಿದರು.

15

ದೇವಾ, ನಮ್ಮ ಮನೆಗೆ ನೀವು ಚಿನ್ನದ ವ್ಯಾಪಾರಿಯಾಗಿ ಬಂದಿರಿ. ದಯವಿಟ್ಟು ಈ ಕಮಲಾಲಯ ಪುಷ್ಕರಿಣಿಯಲ್ಲೇ ನೀವು ನೆಲೆಸಿ, ಇನ್ನು ಮುಂದೆ ಭಕ್ತರನ್ನು ಹರಸಬೇಕು.



ಈ ಕಥೆಯು ತಿರುವಾವೂರಿನ ಚರಿತ್ರೆಯಲ್ಲಿ ಕಂಡುಬರುತ್ತದೆ. ತಿರುವಾವೂರಿನ ಕಮಲಾಲಯ ವೆಂಬ ಪುಷ್ಕರಿಣಿಯ ಈಶಾನ್ಯ ಮೂಲೆಯಲ್ಲಿ ವಿನಾಯಕನ ಮಂದಿರದ ದರ್ಶನವನ್ನು ಇಂದಿಗೂ ಪಡೆಯಬಹುದಾಗಿದೆ.

''ಶ್ರದ್ಧೆ ಹೆಚ್ಚಾದರೆ, ಭಗವಂತನ ಮೇಲೂ ಶ್ರದ್ಧೆ ಹೆಚ್ಚುವುದು. ಶ್ರದ್ಧೆ ಯಾರಲ್ಲಿ ಕಡಿಮೆ ಇರುವುದೋ, ಅವರಿಂದ ಹೆಚ್ಚೇನನ್ನೂ ನಿರೀಕ್ಷಿಸಲಾಗದು.''

— ಶ್ರೀರಾಮಕೃಷ್ಣರು